**ಚಂದ್ರಿಕಾ ಹೆಗಡೆ**

ಕಲೆ: ಗಣೇಶ ಆಚಾರ್ಯ

# ತಥಾಸ್ತು

ಪುಟ್ಟ ಶಂಭೂ ಇತ್ತೀಚೆಗೆ ತುಂಬಾನೇ ಕೆಟ್ಟ ಕೆಟ್ಟ ಮಾತುಗಳನ್ನು ಆಡುವುದು ಕಲಿತು ಬಿಟ್ಟಿದ್ದ. ಯಾರು ಏನೇ ಮಾತನಾಡಿಸಿದರೂ ಸರಿಯಾಗಿ ಉತ್ತರ ಕೊಡದೇ, ‘ಕತ್ತೆ... ಕಿರುಬ... ನಾಯಿ... ಬೆಕ್ಕು...’ ಎಂದು ಬಯ್ಯುತ್ತಾ ಅವರಿಗೇ ಎದುರು ಮಾತಾಡಲು ಶುರು ಮಾಡಿ ಬಿಡುತ್ತಿದ್ದ. ಸಿಟ್ಟು ಬಂದಾಗಲಂತೂ ಅವನ ಬಾಯಿಯಿಂದ, ‘ಕತ್ತೆ... ಕಿರುಬ... ನಾಯಿ... ಬೆಕ್ಕು... ಹಂದಿ... ಕೋಣ...’ ಹೀಗೆ ಬಯ್ಗುಳಗಳ ಸರಮಾಲೆಯೇ ಹರಿಯುತ್ತಿತ್ತು.

